## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.

ಸಿ.ಸಿ.ನಂಃ 242-2014 ಸಿ.ಡಬ್ಲ್ಯೂ –1 ಪಿ.ಡಬ್ಲ್ಯೂ -1

| | | |
|---|---|---|
| ಹೆಸರು | ಃ | ರೇವಣಸಿದ್ದಪ್ಪ |
| ತಂದೆಃ ಗಂಡ | ಃ | ರಾಚಪ್ಪ |
| ವಯಸ್ಸು | ಃ | ೬೦ ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | ಃ | ಕುಡಕಿ |

ದಿನಾಂಕಃ೦೫.೧೨.೨೦೨೩
ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ ಃ**

ಆರೋಪಿತರ ಪರಿಚಯ ಇರುತ್ತದೆ. ಚಾಸಾ-2 ರಿಂದ 7 ರವರ ಪರಿಚಯ ಇರುತ್ತದೆ.

ನಾನು ಹೊಲಕ್ಕೆ ಬಿತ್ತಲು ಉಪಯೋಗಿಸುವ ಕೂರಿಗೆ ದಿಂಡನ್ನು ಬಡಿಗರ ಬಳಿ ತುಂಬಿಸಲು ಹೋಗಿದ್ದೆನು, ಆಗ ಆರೋಪಿತರು ಬಂದು ಜಗಳ ಮಾಡಿ ಕಲ್ಲು ಮತ್ತು ಬಡಿಗೆಯಿಂದ ಹೊಡೆ ಬಡೆ ಮಾಡಿರುತ್ತಾರೆ. ನನಗೆ ಮೂರ್ಚೆ ಹೋಗಿರುತ್ತದೆ, ಮುಂದೆ ನನ್ನನ್ನು ಆಸ್ಪತ್ರೆಗೆ ದಾಖಲು ಮಾಡಿರುತ್ತಾರೆ.ನಾನು ಒಂದು ತಿಂಗಳ ವರೆಗೆ ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ನಂತರ ನಾನು ಸೋಲಾಪುರ ಆಸ್ಪತ್ರೆಗೆ ಹೋಗಿ ತೋರಿಸಿಕೊಂಡಿರುತ್ತೇನೆ. ನಾನು ಪೋಲಿಸರಿಗೆ ಫಿರ್ಯಾದಿಯನ್ನು ಸಲ್ಲಿಸಿರುತ್ತೇನೆ. ಸಾಕ್ಷಿ ಫಿರ್ಯಾದಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುವುದರಿಂದ, ಫಿರ್ಯಾದಿಯನ್ನು ನಿಪಿ-೧ ಎಂದು ಸಹಿಯನ್ನು ನಿಪಿ-೧(ಎ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

**ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.**

ಸದರಿ ಘಟನೆಯು ದಿ. ೧೮.೦೩.೨೦೧೪ ರಂದು ಬೆಳಿಗ್ಗೆ ೮.೦೦ ಗಂಟೆಗೆ ನಡೆದಿರುತ್ತದೆ ಎಂದರೆ ಸರಿ. ನಾನು ಶಿವಾನಂದ ಸುತಾರ ರವರ ಬಳಿ ಕೂರಿಗೆ ತುಂಬಿಸಲು ಹೋಗಿದ್ದೆನು ಎಂದರೆ ಸರಿ. ಆರೋಪಿತರೆಲ್ಲರೂ ಕೂಡಿ ಬಂದು ಆರೊಪಿ ನಂ.೧ ಹೊಲದಲ್ಲಿ ಪಾಲು ಕೇಳುತ್ತೀಯಾ ಎಂದು ಹೊಡೆದನು ಎಧಂರೆ ಸರಿ. ಆರೊಪಿ ನಂ.೨ ತನ್ನ ಕೈಯಲ್ಲಿರುವ ಕಟ್ಟಿಗೆಯಿಂದ ತಲೆಗೆ ಹೊಡೆದು ರಕ್ತಗಾಯ ಮಾಡಿದನು ಎಂಧರೆ ಸರಿ. ಆರೋಪಿ ನಂ.೬ ಕಲ್ಲಿನಿಂದ ಮುಗೈಗೆ ಮತ್ತು ಅಂಗೈಗೆ ಹೊಡೆದು ರಕ್ತಗಾಯಪಡಿಸಿದನು ಎಂದರೆ ಸರಿ. ಆರೋಪಿ ನಂ.೫ ನನ್ನನ್ನು ತೆಕ್ಕೆಗೆ ಹಿಡಿದು ಹಿಡಿದುಕೊಂಡಿದ್ದನು ಎಂದರೆ ಸರಿ. ಆರೋಪಿ ನಂ.೪ ನನಗೆ ಕೈಯಿಂದ ಹೊಡೆ ಬಡೆ ಮಾಡಿದನು ಎಂದರೆ ಸರಿ. ಆರೋಪಿ ನಂ.೩ ಮತ್ತು ೬ ರವರು ಚಾಸಾ-೨ ರವರಿಗೆ ಹೊಡೆ ಬಡೆ ಮಾಡಿರುತ್ತಾರೆ ಎಂದರೆ ಸರಿ. ಆರೋಪಿ

ನಂ.೭ ಚಾಸಾ-೨ ರವರಿಗೆ ಕೈಯಿಂದ ಕಪಾಳಕ್ಕೆ ಹೊಡೆದನು ಎಂದರೆ ಸರಿ. ಸದರಿ ಜಗಳದ ಸಪ್ಪಳ ಕೇಳಿ ಚಾಸಾ-೫ ರಿಂದ ೭ ರವರು ಜಗಳ ಬಿಡಿಸಿದರು ಎಂದರೆ ಸರಿ.

**<u>ಪಾಟೀ ಸವಾಲು ಆರೋಪಿತರ ಪರ ಶ್ರೀ ಎಸ್.ಎ.ಕೆ. ವಕೀಲರಿಂದ</u>**

ನಾನು ಮತ್ತು ಆರೋಪಿತರು ಬೀರಲಿಂಗೇಶ್ವರ ದೇವಸ್ಥಾನದ ಅರ್ಚಕರಿದ್ದೇವೆ ಎಂದರೆ ಸರಿ. ಯಾರಿಗೆ ಬೀರಲಿಂಗೇಶ್ವರ ದೇವಸ್ಥಾನದ ಪೂಜೆ ಮಾಡುವ ಪಾಳಿ ಬಂದಿರುತ್ತದೆಯೋ ಅವರೇ ಬೀರಲಿಂಗೇಶ್ವರ ದೇವಸ್ಥಾನದ ೪ ಎಕರೆ ಜಮೀನನ್ನು ಬಿತ್ತು ಬೆಳೆ ಮಾಡುತ್ತಾರೆ ಎಂಥರೆ ಸರಿ. ಸದರಿ ಬೀರಲಿಂಗೇಶ್ವರ ದೇವಸ್ಥಾನದ ಪೂಜೆ ಪಾಳಿ ವರ್ಷ ವರ್ಷ ಬದಲಾವಣೆ ಆಗುತ್ತದೆ ಎಂದರೆ ಸರಿ. ನಮ್ಮ ಪಾಲಿಗೆ ಪೂಜಾ ಪಾಳಿ ಬಂದಾಗ ನಮ್ಮಲ್ಲಿ ಸಹ ಕೂಡಾ ವರ್ಷ ವರ್ಷ ಬದಲಾವಣೆ ಆಗುತ್ತದೆ ಎಂದರೆ ಸರಿ. ನಮ್ಮ ಕುಟುಂಬದವರಿಗೆ ಪಾಳಿ ಐದು ವರ್ಷಕ್ಕೊಮ್ಮೆ ಬರುತ್ತದೆ. ಆರೋಪಿತರು ಮತ್ತು ನಮ್ಮ ನಡುವೆ ಸದರಿ ಬೀರಲಿಂಗೇಶ್ವರ ದೇವಸ್ಥಾನದ ಜಮೀನಿನ ಸಲುವಾಗಿ ಮೊದಲಿನಿಂದಲೂ ಜಗಳ ಇರುತ್ತದೆ ಎಂಥರೆ ಸರಿ. ಆರೋಪಿತರು ತಮ್ಮ ಪಾಳಿಗೆ ಬಂದಾಗ ಜಮೀನನ್ನು ಬಿತ್ತು ಬೆಳೆ ಮಾಡಿ ಬಿಡುತ್ತಾರೆ ಎಂದರೆ ಸರಿ.

ಸದರಿ ಘಟನೆ ಆದಾಗ ನಾನು ಬಡಿಗೆರ ಮನೆಯ ಹತ್ತಿರ ಇದ್ದೆನು. ನಾನು ಬಡಿಗೇರ ಮನೆ ಹತ್ತಿರ ಹೋದಾಗ ಆರೋಪಿತರು ಅಲ್ಲಿಯೇ ಇದ್ದರು ಎಂಥರೆ ಸರಿ ಅಲ್ಲ, ನಾನು ಹೋದ ನಂತರ ಬಂದಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿತರನ್ನು ನಾನೇ ತಡೆ ಹಿಡಿದಿರುತ್ತೇನೆ ಎಂಥರೆ ಸರಿ ಅಲ್ಲ. ಆರೊಪಿತರನ್ನು ತಡೆ ಹಿಡಿದು ನಾವೇ ಹೊಡೆ ಬಡೆ ಮಾಡಿರುತ್ತೇವೆ ಎಂದರೆ ಸರಿ ಅಲ್ಲ. ನಾನು ಒಂದು ತಿಂಗಳದವರೆಗೆ ಸರಕಾರಿ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ಒಂದು ತಿಂಗಳದವರೆಗೆ ನನಗೆ ಪ್ರಜ್ಞೆ ಇರಲಿಲ್ಲ ಎಂಥರೆ ಸರಿ, ಒಂದು ತಿಂಗಳಲ್ಲಿ ಏನಾಯಿತು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನನ್ನ ಪಾಲಿಗೆ ಬಂದಾಗ ನಾನು ಬಿತ್ತು ಬೆಳೆ ಮಾಡುತ್ತೇನೆ, ಅವರ ಪಾಲಿಗೆ ಬಂದಾಗ ಆರೋಪಿತರು ಬಿತ್ತು ಬೆಳೆ ಮಾಡುತ್ತಾರೆ, ಸದರಿ ಜಮೀನನ್ನು ನನ್ನ ಪಾಳಿ ಬಂದಾಗ ನಾನು ಬಿತ್ತು ಬೆಳೆ ಮಾಡಲು ಕೊಡಲಾರದೇ ಆರೋಪಿತರಿಗೆ ಹೊಡೆ ಬಡೆ ಮಾಡಿ ಖೊಟ್ಟಿ ಫಿರ್ಯಾದಿಯನ್ನು ಸಲ್ಲಿಸಿರುತ್ತೇನೆ ಎಂಥರೆ ಸರಿ ಅಲ್ಲ. ಸದರಿ ದೇವಸ್ಥಾನದ ಪೂಜೆ ಬಹಳ ಲೇಟಾಗಿ ಬರುತ್ತದೆ, ಆದಕಾರಣದಿಂದ ಸದರಿ ಜಮೀನನ್ನು ನಾನು ಬಿತ್ತು ಬೆಳೆ ಮಾಡಬೇಕೆನ್ನುವ ಉದ್ದೇಶದಿಂದ ಮತ್ತು ಆರೋಪಿತರನ್ನು ಹೆದರಿಸಿ ನಾನೇ ಬಿತ್ತು ಬೆಳೆ ಮಾಡಬೇಕೆಂಬ ಉದ್ದೇಶದಿಂದ ಖೊಟ್ಟಿ ಫಿರ್ಯಾದಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ ಅಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಂಗತಿಗಳನ್ನು ಇದೇ ಮೊದಲ ಬಾರಿಗೆ ಹೇಳುತ್ತಿದ್ದೇನೆ ಎಂಥರೆ ಸರಿ ಅಲ್ಲ. ಜಮೀನನ್ನು ನಾನೇ ನಿರಂತರವಾಗಿ ಉಳುಮೆ ಮಾಡಬೇಕೆನ್ನುವ ಉದ್ದೇಶದಿಂದ ಖೊಟ್ಟಿ ಫಿರ್ಯಾದಿಯಲ್ಲಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಆರೋಪಿತರು ನನ್ನನ್ನು ಯಾವತ್ತು ಹೊಡೆ ಬಡೆ ಮಾಡಿರುವುದಿಲ್ಲ, ಮತ್ತು ನಾನು ಅವರನ್ನು ಹೊಡೆ ಬಡೆ ಮಾಡಿ ಖೊಟ್ಟಿ ಫಿರ್ಯಾದಿಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಸದರಿ ಜಮೀನನ್ನು ದಬ್ಬಾಳಿಕೆಯಿಂದ ಕಬಳಿಸಬೇಕೆನ್ನುವ ಉದ್ದೇಶದಿಂದ ಖೊಟ್ಟಿ ಫಿರ್ಯಾದಿಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

ನಾನು ಹೊಲಕ್ಕೆ ಬಿತ್ತಲು ಉಪಯೋಗಿಸುವ ಕೂರಿಗೆ ದಿಂಡನ್ನು ಬಡಿಗರ ಬಳಿ ತುಂಬಿಸಲು ಹೋಗಿದ್ದೆನು, ಆಗ ಆರೋಪಿತರು ಬಂದು ಜಗಳ ಮಾಡಿ ಕಲ್ಲು ಮತ್ತು ಬಡಿಗೆಯಿಂದ ಹೊಡೆ ಬಡೆ

ಮಾಡಿರುತ್ತಾರೆ, ನನಗೆ ಮೂರ್ಚೆ ಹೋಗಿರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ, ಮುಂದೆ ನನ್ನನ್ನು ಆಸ್ಪತ್ರೆಗೆ ದಾಖಲು ಮಾಡಿರುತ್ತಾರೆ, ನಾನು ಒಂದು ತಿಂಗಳ ವರೆಗೆ ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ, ನಂತರ ನಾನು ಸೋಲಾಪುರ ಆಸ್ಪತ್ರೆಗೆ ಹೋಗಿ ತೋರಿಸಿಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

ಸದರಿ ಘಟನೆಯು ದಿ. ೧೮.೦೩.೨೦೧೪ ರಂದು ಬೆಳಿಗ್ಗೆ ೮.೦೦ ಗಂಟೆಗೆ ನಡೆದಿರುತ್ತದೆ, ನಾನು ಶಿವಾನಂದ ಸುತಾರ ರವರ ಬಳಿ ಕೂರಿಗೆ ತುಂಬಿಸಲು ಹೋಗಿದ್ದೆನು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಆರೋಪಿತರೆಲ್ಲರೂ ಕೂಡಿ ಬಂದು ಆರೋಪಿ ನಂ.೧ ಹೊಲದಲ್ಲಿ ಪಾಲು ಕೇಳುತ್ತೀಯಾ ಎಂದು ಹೊಡೆದನು, ಆರೋಪಿ ನಂ.೨ ತನ್ನ ಕೈಯಲ್ಲಿರುವ ಕಟ್ಟಿಗೆಯಿಂದ ತಲೆಗೆ ಹೊಡೆದು ರಕ್ತಗಾಯ ಮಾಡಿದನು, ಆರೋಪಿ ನಂ.೬ ಕಲ್ಲಿನಿಂದ ಮುಗೈಗೆ ಮತ್ತು ಅಂಗೈಗೆ ಹೊಡೆದು ರಕ್ತಗಾಯಪಡಿಸಿದನು, ಆರೋಪಿ ನಂ.೫ ನನ್ನನ್ನು ತೆಕ್ಕೆಗೆ ಹಿಡಿದು ಹಿಡಿದುಕೊಂಡಿದ್ದನು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಆರೋಪಿ ನಂ.೪ ನನಗೆ ಕೈಯಿಂದ ಹೊಡೆ ಬಡೆ ಮಾಡಿದನು, ಆರೋಪಿ ನಂ.೩ ಮತ್ತು ೭ ರವರು ಚಾಸಾ-೨ ರವರಿಗೆ ಹೊಡೆ ಬಡೆ ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ, ಆರೋಪಿ ನಂ.೭ ಚಾಸಾ-೨ ರವರಿಗೆ ಕೈಯಿಂದ ಕಪಾಳಕ್ಕೆ ಹೊಡೆದನು, ಸದರಿ ಜಗಳದ ಸಪ್ಪಳ ಕೇಳಿ ಚಾಸಾ-೫ ರಿಂದ ೭ ರವರು ಜಗಳ ಬಿಡಿಸಿದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

**ಮರುವಿಚಾರಣೆಃ-** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.ಆಳಂದ